


ಟೀಕ್ ಮ್ಯುಸಿಯಂ ಹೊರ ನೋಟ

ಮೂಲಕ ದೇಶಾಂತರ ಸುತ್ತುತ್ತಿದ್ದ ಬ್ರಿಟಿಷರು ಹಿಂದೆ ಹಡಗುಗಳನ್ನು ನಿರ್ಮಿಸಲು ಬಳಸುತ್ತಿದ್ದುದು ಓಕ್ ಮರಗಳನ್ನು. ಆದರೆ ಆ ಮರಗಳ ಸಂಖ್ಯೆ ಕ್ಷೀಣಿಸುತ್ತಾ ಬಂದದ್ದರಿಂದ ಪರ್ಯಾಯ ಮರದ ಹುಡುಕಾಟ ಆರಂಭಿಸಿದರು. ಹಾಗೆ ಮರ ಹುಡುಕುತ್ತಾ ಬಂದದ್ದು ನಿಲಂಬೂರಿಗೆ. ಇಲ್ಲಿ ಅವರಿಗೆ ಸಿಕ್ಕಿದ್ದು ಮಲಬಾರ್ ಟೀಕ್. ಈ ತೇಗದ ಮರದ ವಿಶೇಷವೆಂದರೆ, ಉಪ್ಪು ನೀರಿನಲ್ಲಿ ಎಷ್ಟು ದಿನ ಇದ್ದರೂ ಹಾಳಾಗುವುದಿಲ್ಲ. ಹಾಗೆಯೇ ನೀರು ಮಂಜುಗಡ್ಡೆಯಾಗುವ ವಿಪರೀತ ಶೀತ ಪ್ರದೇಶದಲ್ಲೂ ಗಟ್ಟಿಮುಟ್ಟಾಗಿಯೇ ಇರುತ್ತದೆ. ಬ್ರಿಟಿಷರು ಹಡಗು ನಿರ್ಮಿಸಲು ಇದಕ್ಕಿಂತ ಉತ್ತಮ ಮರ ಸಿಗುವುದಿಲ್ಲ ಎಂದು ನಿರ್ಧರಿಸಿದರು. ಸರಿ, ಇಲ್ಲಿಂದ ಮರಗಳು ರವಾನೆ ಆಗತೊಡಗಿದವು. ಕ್ರಮೇಣ ಈ ತೇಗದ ಮರಗಳನ್ನು ದೊಡ್ಡ ಸಂಖ್ಯೆಯಲ್ಲಿ ಬೆಳೆಸಲು ನಿರ್ಧರಿಸಿ ಪ್ಲಾಂಟೇಶನ್ ಯೋಜನೆಯನ್ನು ರೂಪಿಸಿದರು.

ಮಲಬಾರ್ ತೇಗದ ಮರ ಗುಣಮಟ್ಟದ್ದು. ಈ ಮರದಲ್ಲಿ ಟೆಕ್ನೋನಿನ್ (**tecnonin**) ಎನ್ನುವ ಎಣ್ಣೆಯ ಅಂಶ ಜಾಸ್ತಿ. ಆ ಎಣ್ಣೆಯಿಂದಾಗಿಯೇ ಮರ ಗಟ್ಟಿಮುಟ್ಟು. ಕೀಟಗಳು ಕೊರೆಯುವುದಿಲ್ಲ, ಹುಳ ಬೀಳುವುದಿಲ್ಲ, ಗೆದ್ದಲು ಹಿಡಿಯುವುದಿಲ್ಲ. ಜತೆಗೆ ಮರದ ತಿರುಳಿನ ಚಿನ್ನದ ಕಂದು ಬಣ್ಣವೂ ಆಕರ್ಷಣೀಯ.

ಕಾಡಿನೊಳಕ್ಕೆ ಪ್ರಶಾಂತವಾಗಿ ಹರಿಯುತ್ತಿದೆ ಚಾಲಿಯಾರ್ ನದಿ. ಎರಡೂ ಬದಿಗಳಲ್ಲಿ ದಟ್ಟ ಕಾಡು. ಇದು ಕನೊಲ್ಲಿ ಕಾಲುವೆ ಎಂದೇ ಹೆಸರಾಗಿತ್ತು. ಈ ಕಾಲುವೆಯೂ ಕಲೆಕ್ಟರ್ ಕನೊಲ್ಲಿಯವರ ಕೊಡುಗೆ. ದೊಡ್ಡ ದೊಡ್ಡ ಮರಗಳನ್ನು ಕಡಿದು, ತೆಪ್ಪದಂತೆ ಕಟ್ಟಿ ನದೀ ನೀರಿನ ಮೇಲೆ ತೇಲಿಸಿದರೆ ಮಲಬಾರ್‌ನಿಂದ ಕೊಚ್ಚಿಗೆ ಮರಗಳು ನಯಾಪೈಸೆ ಖರ್ಚಿಲ್ಲದೆ ಪಯಣಿಸುತ್ತವೆ. ಆ ಕಾಲದಲ್ಲಿ ಮರಗಳನ್ನು ಸಾಗಿಸುತ್ತಿದ್ದುದು ಹೀಗೆಯೇ.

## ಕನೊಲ್ಲಿ ಪ್ಲಾಟ್

ಪ್ರಕೃತಿಯ ಮಡಿಲಲ್ಲಿ ಅತ್ಯಂತ ಸುಂದರ ತಾಣ ಈ ತೂಗುಸೇತುವೆಯದ್ದು. 2009ರಲ್ಲಿ ನಿರ್ಮಿಸಲಾದ ಈ ತೂಗುಸೇತುವೆಯ ಮೇಲೆ ಒಮ್ಮೆಲೆ 20 ಜನರು ನಡೆದಾಡಬಹುದು. ತೂಗುಸೇತುವೆ ಹತ್ತಿ ಚಾಲಿಯಾರ್ ನದಿಯನ್ನು ದಾಟಿ ಆ ಬದಿಯ ಅರಣ್ಯಕ್ಕೆ ಹೋದಾಗ ಕಾಣಸಿದ್ದು ಕನೊಲ್ಲಿ ಪ್ಲಾಟ್.

ಅರಣ್ಯದ ನಡುವೆಯೇ ಸುಮಾರು ಐದೂವರೆ ಎಕರೆ (ಕರಾರುವಾಕ್ಕಾಗಿ 5.675) ವಿಸ್ತೀರ್ಣದಲ್ಲಿ ಒಟ್ಟು 115 ಬೃಹತ್ ಗಾತ್ರದ ತೇಗದ ಮರಗಳಿವೆ. 1846ರಲ್ಲಿ ನೆಟ್ಟ ಈ ಮರಗಳನ್ನು ನೋಡಲೆಂದೇ ವೃಕ್ಷಪ್ರೇಮಿಗಳು ಬರುತ್ತಾರೆ. 172 ವರ್ಷ ವಯಸ್ಸಿನ ಈ ಮರಗಳನ್ನು ನೋಡುವುದೇ ಒಂದು ಅನಿರ್ವಚನೀಯ ಅನುಭವ. ನೆಟ್ಟಗೆ, ಯಾವ ಹಮ್ಮು ಬಿಮ್ಮಿಲ್ಲದೆ ನೆಟ್ಟಗೆ ಆಕಾಶಕ್ಕೆ ಬೆಳೆದು ನಿಂತ ತೇಗದ ಮರಗಳು. ಒಂದಕ್ಕಿಂತ ಒಂದು ದಪ್ಪ, ಒಂದಕ್ಕಿಂತ ಒಂದು ಮಿಗಿಲು. ಮರದ ಬುಡದಲ್ಲಿ ನಿಂತು ತಲೆ ಎತ್ತಿದರೆ ಮುಗಿಲು ಕಾಣುವುದಿಲ್ಲ, ಮನಮಸ್ತಿಷ್ಕದ ತುಂಬ ತೇಗದ ಬಿಂಬ.

1943ರಲ್ಲಿ ಕನೊಲಿ ಪ್ಲಾಟ್ ಅನ್ನು ಶಾಶ್ವತ ಸಂರಕ್ಷಣಾ ಸ್ಥಳ ಎಂದು ಘೋಷಿಸಲಾಯಿತು. ಈ ಮರಗಳನ್ನು ಕಡಿಯುವಂತಿಲ್ಲ. (ಇದಕ್ಕೆ ಕನೊಲ್ಲಿ ಪ್ಲಾಟ್ ಎಂಬ ನಾಮಕರಣ ಆದದ್ದು 1933ರಲ್ಲಿ.) ಅದೇ ವರ್ಷ ಎಲ್ಲ 115 ಮರಗಳಿಗೂ ಗುರುತಿನ ಸಂಖ್ಯೆಯನ್ನು ಕೊಟ್ಟು ಪಟ್ಟಿ ಹಾಕಲಾಯಿತು. ಕನೊಲಿ ಪ್ಲಾಟ್‌ನ ಅತ್ಯಂತ ದೊಡ್ಡ ಮರದ (ಟ್ರೀ ನಂಬರ್ 23) ಸುತ್ತಳತೆ 429 ಸೆಂಟಿ ಮೀಟರ್ ಮತ್ತು ಎತ್ತರ 49.2 ಮೀಟರ್! ಉಳಿದ ಮರಗಳ ಗಾತ್ರವೂ ಅವುಗಳ ಸುತ್ತಮುತ್ತಲೇ ಇವೆ. ಸುಮಾರು ಐದೂವರೆ ಎಕರೆ ವಿಸ್ತೀರ್ಣದಲ್ಲಿ ಇತರ ಮರಗಳ ನಡುವೆಯೇ ಬೆಳೆದಿರುವ ಈ 115 ಮರಗಳನ್ನು ಒಂದೊಂದಾಗಿ ಅಲ್ಲಿಯ ಸಿಬ್ಬಂದಿ ತೋರಿಸುತ್ತಾ ನಡೆದರೆ ನಮಗೆ ಇನ್ಯಾವುದೋ ಲೋಕದಲ್ಲಿ ನಡೆಯುತ್ತಿರುವ ಸಂಭ್ರಮ. 2010ರಲ್ಲಿ ಇದನ್ನು ವಿಶ್ವ ಪರಂಪರೆಯ ತಾಣವೆಂದು ಗುರುತಿಸಲು ಭಾರತ ಸರಕಾರವು ಪ್ರಸ್ತಾಪ ಸಲ್ಲಿಸಿತ್ತು. ಅಧಿಕೃತವಾಗಿ ಆ ಬಗ್ಗೆ ಘೋಷಣೆ ಆದಂತಿಲ್ಲ; ಆದರೆ ಈ ಕನೊಲ್ಲಿ ಪ್ಲಾಟ್ ಯಾವ ವಿಶ್ವ ಪರಂಪರೆಯ ತಾಣಗಳಿಗೂ ಕಡಿಮೆಯಿಲ್ಲ ಎನ್ನುವುದಂತೂ ಖಂಡಿತ.

ಕೇರಳ ಅರಣ್ಯ ಇಲಾಖೆ ಈ ತೇಗದ ಕಾಡನ್ನು ಅಧ್ಯಯನ ಮತ್ತು ಸಂಶೋಧನೆಯ ಉದ್ದೇಶಗಳಿಗೆ ತೆರೆದಿಟ್ಟಿದೆ. ನೂರಾರು ವಿದ್ಯಾರ್ಥಿಗಳು, ಅರಣ್ಯ ಇಲಾಖೆಯ ನೂರಾರು ಅಧಿಕಾರಿಗಳು ಇಲ್ಲಿಗೆ ಅಧ್ಯಯನಕ್ಕೆ, ತರಬೇತಿಗೆ ಬರುತ್ತಾರೆ. ಮರಗಳನ್ನು ಬೆಳೆಸುವ ಬಗ್ಗೆ, ಅವುಗಳ ಸಂರಕ್ಷಣೆಯ